### ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ/ಕಂ/ಪಹಣಿ/ವಿವಾದ/50/2014-15 ದಿನಾಂಕ 26/05/2016

ಉಪಸ್ಥಿತರು:- ಹೆಚ್. ವಿಶ್ವನಾಥ್ , ಹೂವಿನಹಡಗಲಿ.

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| 1) ಶ್ರೀಮತಿ ಜಂಗಳಿ ಶಾಂತವ್ವ ಗಂಡ ಲೇಟ್ ಪಕ್ಕೀರಪ್ಪ ಉಪನಾಯಕನಹಳ್ಳಿ<br>2) ಶ್ರೀಮತಿ ಹುಲುಗಮ್ಮ ಗಂಡ ಮಾಗಳದ ನಾಗಪ್ಪ ಹೂವಿನಹಡಗಲಿ<br>(ಶ್ರೀ ಎಸ್ ಎಸ್ ಹೆಚ್, ವಕೀಲರು, ಹೂವಿನಹಡಗಲಿ) | ಶ್ರೀ ಹಾಲಪ್ಪ ತಂದೆ ಪಕ್ಕೀರಪ್ಪ ಉಪನಾಯಕನಹಳ್ಳಿ |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ | ವಿಸ್ತೀರ್ಣ(ಎಕರೆ.ಸೆಂಟ್ಸ್) |
|---|---|---|
| ಶಿವಲಿಂಗನಹಳ್ಳಿ | 27 | 4.54 |

ಪ್ರಸ್ತಾವನೆ:-

ಮೇಲಿನ ದಾವಾ ಜಮೀನನ್ನು ವಾದಿಯು ಕ್ರಯ ಪತ್ರ ಸಂಖ್ಯೆ 2483/2014-15 ದಿನಾಂಕ 18/11/2014 ರಂತೆ ಶ್ರೀಮತಿ ಜಂಗಳಿ ಶಾಂತವ್ವ ಗಂಡ ಲೇಟ್ ಪಕ್ಕೀರಪ್ಪ ಉಪನಾಯಕನಹಳ್ಳಿ ರವರಿಂದ ದಾನ ಪಡೆದಿರುತ್ತಾರೆ. ಈ ಹಿನ್ನಲೆಯಲ್ಲಿ ಜೆ ನಮೂನೆ ಪ್ರಕಾರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಾಲ 128ರ ಅನ್ವಯ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ, ನಿಗಧಿತ ಅವಧಿಯೊಳಗೆ ಗ್ರಾಮದಲ್ಲಿ ಗ್ರಾಮಲೆಕ್ಕಾದಿಕಾರಿಗಳು ಶಿವಲಿಂಗನಹಳ್ಳಿ ರವರು ನಮೂನೆ 21ನ್ನು ಜಾರಿಮಾಡಿದಾಗ ದಿನಾಂಕ 12/12/2014ರಂತೆ ಪ್ರತಿವಾದಿಗಳಿಂದ ಲಿಖಿತ ಆಕ್ಷೇಪಣೆ ಸ್ವೀಕೃತವಾಗಿರುವುದರಿಂದ ಕಂದಾಯ ಪರಿವೀಕ್ಷಕರು ಹಡಗಲಿ ರವರು ಹಕ್ಕು ಬದಲಾವಣೆ ಹೆಚ್ 29/2014-2015 ದಿನಾಂಕ 18/11/2014ರ ಪ್ರಕಾರ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ವಿಚಾರಣೆಗಾಗಿ ಈ ಕಾರ್ಯಾಲಯಕ್ಕೆ ಪ್ರಕರಣವನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕರ್ನಾಟಕ ಭೂ ಕಂದಾಯ ಕಾಯ್ದು 1964 ಕಾಲಂ129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಹಾಗೂ ಪ್ರತಿವಾದಿಗಳಗೆ ಕೇಳಿಕೊಳ್ಳಲು ಅವಕಾಶ ನೀಡಿ ದಿನಾಂಕ 09/01/2015 ರಿಂದ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಯಾದ ಶ್ರೀಮತಿ ಹುಲುಗಮ್ಮ ಗಂಡ ಮಾಗಳದ ನಾಗಪ್ಪ ಹೂವಿನಹಡಗಲಿ ರವರು ಶಿವಲಿಂಗನಹಳಿ ಗ್ರಾಮದ ಸರ್ವೇ ನಂಬರ 27 (ಎ) 4.54 ಎಕರೆ ಜಮೀನನ್ನು ಶ್ರೀಮತಿ ಜಂಗಳಿ ಶಾಂತವ್ವ ಗಂಡ ಲೇಟ್ ಪಕ್ಕೀರಪ್ಪ ಉಪನಾಯಕನಹಳ್ಳಿ ರವರಿಂದ ಉಪನೂಂದಣಾಧಿಕಾರಿಗಳ ಹಡಗಲಿ ರವರಲ್ಲಿ ನೂಂದಣಿ ದಸ್ತಾವೇಜು ಸಂಖ್ಯೆ 2483/2014-15 ದಿನಾಂಕ 18/11/2014ರಲ್ಲಿ ದಾನ ಪಡೆದಿರುತ್ತೇನೆ ಎಂದು ತಿಳಿಸಿ ಅದರಂತೆ ತನ್ನ ಹೆಸರಿಗೆ ಪಹಣಿಯಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿ ತಮ್ಮ ವಾದವನ್ನು ತಿಳಿಸಿರುತ್ತಾರೆ

ಪ್ರತಿವಾದಿಗಳಾದ ಶ್ರೀ ಹಾಲಪ್ಪ ತಂದೆ ಪಕ್ಕೀರಪ್ಪ ಉಪನಾಯಕನಹಳ್ಳಿ ಇವರು ಸದರಿ ಜಮೀನು ತಮ್ಮ ತಾಯಿಯ ಆಸ್ತಿಯಾಗಿದ್ದು ತಮಗೂ ಈ ಭೂಮಿಯಲ್ಲಿ ಹಕ್ಕು ಇರುವುದಾಗಿ ತಕರಾರು ಸಲ್ಲಿಸಿದ್ದು, ಅರ್ಜಿದಾರರ

ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ಅವರ ಕ್ರಯ ಪತ್ರವನ್ನು ರದ್ದು ಪಡಿಸಲು ತಕರಾರು ಅರ್ಜಿಯಲ್ಲಿ ತಿಳಿಸಿರುತ್ತಾರೆ.

ಈ ಪ್ರಕರಣದಲ್ಲಿ ವಾದಿಗಳ/ ಪ್ರತಿವಾದಿಗಳ ಹಾಗೂ ಅವರ ಪರ ನ್ಯಾಯವಾದಿಗಳ ವಾದವನ್ನು ಆಲಿಸಲಾಯಿತು. ಪ್ರತಿವಾದಿಗಳು ಶ್ರೀ **ಹಾಲಪ್ಪ ತಂದೆ ಪಕ್ಕೀರಪ್ಪ ಉಪನಾಯಕನಹಳ್ಳಿ** ರವರು ನೀಡಿರುವ ಮನವಿಯನ್ನು ತಿರಸ್ಕರಿಸಲು ಕೋರಿರುತ್ತಾರೆ ಆದರೆ ಪ್ರತಿವಾದಿಗಳಿಗೆ ಹಲವಾರು ಬಾರಿ ವಿಚಾರಣೆಗೆ ನೋಟಿಸು ನೀಡಿದರೂ ಅವರು ಸತತವಾಗಿ ಗೈರು ಹಾಜರಾಗಿರುತ್ತಾರೆ ಆದ್ದರಿಂದ ವಾದಿಗಳಾದ **ಶ್ರೀಮತಿ ಹುಲುಗಮ್ಮ ಗಂಡ ಮಾಗಳದ ನಾಗಪ್ಪ ಹೂವಿನಹಡಗಲಿ** ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ನೊಂದಾಯಿತ ದಾನ ಪತ್ರ ಪ್ರಕಾರ ನಮೂದಾಗಿರುವ ಹಕ್ಕು ಬದಲಾವಣೆ ತಿರಸ್ಕರಿಸಲು ಕೋರಿರುವುದು ಸಮಂಜಸ ಆಗಿರುವುದಿಲ್ಲ ಕಾರಣ ಪ್ರತಿವಾದಿಗಳ ಮನವಿಯನ್ನು ಪರಿಗಣಿಸಲು ಆವಕಾಶ ವಿಲ್ಲದ ಕಾರಣ ಮಾನ್ಯ ಉಚ್ಚನ್ಯಾಯಲಯ ಬೆಂಗಳೂರು ರವರ ರಿಟ್ ಪಿಟಿಕ್ಷನ್ ನಂಬರ್ 3685/1993 ಆದೇಶದನ್ವಯ ನೊಂದಣಿ ಪತ್ರವನ್ನು ರದ್ದು ಗೊಳಿಸಲು ಅಥವಾ ತಿರಸ್ಕರಿಸಲು ಈ ನ್ಯಾಯಲಯಕ್ಕೆ ಅಧಿಕಾರ ಇಲ್ಲದಿರುವುದರಿಂದ ಹಾಗೂ ಭೂ ಕಂದಾಯ ಕಾಯ್ದೆ ಅನ್ವಯ 1964 ಕಾಲಂ 128 ರನ್ವಯ ನೊಂದಣಿ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕಂದಾಯ ಅಧಿಕಾರಿಗಳ ಆದ್ಯ ಕರ್ತವ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನೋಂದಾಯಿತ ದಾನ ಪತ್ರ ಪ್ರಕಾರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡ ಆದೇಶ.

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ ಹಿನ್ನೆಲೆ ಕಾರಣಗಳಿಂದಾಗಿ ನೊಂದಣಿ ಕ್ರಯಪತ್ರ ಸಂಖ್ಯೆ 2483 /2014-15 ದಿನಾಂಕ 18/11/2014ರ ಪ್ರಕಾರ ವಾದಿಗಳಾದ ಶ್ರೀಮತಿ ಹುಲುಗೆಮ್ಮ ಗಂಡ ಮಾಗಳದ ನಾಗಪ್ಪ ಹೂವಿನಹಡಗಲಿ ರವರ ಹೆಸರಿಗೆ ಶಿವಲಿಂಗನಹಳ್ಳಿ ಗ್ರಾಮದ **ಸರ್ವೇ ನಂಬರ** 27 ವಿಸ್ತೀರ್ಣ 4.54 ಎಕರೆ ಜಮೀನನ್ನು ನೋಂದಾಯಿತ ದಾನ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ. ಹಾಗೂ ಪ್ರತಿವಾದಿಗಳು ಬಾದಿತರಾದಲ್ಲಿ ತಮ್ಮ ಹಕ್ಕು-ಹಿತಾಸಕ್ತಿಯನ್ನು ಉನ್ನತ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಈ ಆದೇಶವನ್ನು ಬೆರಳಚ್ಚು ಮಾಡಿಸಿ, ದಿನಾಂಕ 26/05/2016 ಬಹಿರಂಗ ನ್ಯಾಯಲದಲ್ಲಿ ಘೋಷಿಸಲಾಯಿತು.

26/5/16

ತಹಶೀಲ್ದಾರರು
ಹೂವಿನಹಡಗಲಿ.

ಪ್ರತಿಗಳನ್ನು;

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.
2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.